ಈ ದಿನ ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ವಾದಿ ಪರ ವಕೀಲರಿಂದಃ</u>**

ಬಸವಪಟ್ಟಣ ಗ್ರಾಮದ ಶ್ಯಾಮಮೂರ್ತಿ ನನಗೆ ಪರಿಚಯಸ್ಥರು. ಅವರ ಆಸ್ತಿ ಪಕ್ಕದಲ್ಲಿ ನಮ್ಮ ಆಸ್ತಿ ಇದೆ ಎಂದರೆ ಸರಿ. ಶ್ಯಾಮಮೂರ್ತಿರವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಅವರ ಪಾಲಿಗೆ ಬಂದ ಖಾತೆ ಸಂ. 73 ಆಸ್ತಿ ಸಂ. 62/1 ಹಾಗೂ 62/4 ನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖಾನೆ ಷುಮಾರಿ ಸಂ. 73ರ ಆಸ್ತಿಯನ್ನು ಬಸವಪಟ್ಟಣ ಗ್ರಾಮದ ಮಿರ್ಜಾಕರ್ ಖಂಡೋಜಿ ರಾವ್ ಹಾಗೂ ಅವರ ಮಕ್ಕಳು ರಾಮಲಿಂಗಪ್ಪ ಹಾಗೂ ಹನುಮಂತರಾವ್ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಖರೀದಿಸಿದ ನಂತರ ಮನೆಯನ್ನು ನಿರ್ಮಿಸಿ ಉತ್ತರ ದಿಕ್ಕಿಗೆ 3 ಅಡಿ ಖಾಲಿ ಜಾಗ ಬಿಟ್ಟುರುತ್ತಾರೆ ಎಂದರೆ ಸರಿಯಲ್ಲ. ಖಾಲಿ ಜಾಗದ ನಂತರ ನನ್ನ ಆಸ್ತಿ ಇರುತ್ತದೆ ಎಂದರೆ ಖಾಲಿ ಜಾಗವೂ ಸಹ ನನಗೆ ಸೇರಿದ್ದು ಎಂದು ಸಾಕ್ಷಿ ನುಡಿಯುತ್ತಾರೆ.

2. ವಾದಿಗಳು ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಸಲ್ಲಿಸಿರುವ ದಾವೆ ಸತ್ಯವಾಗಿವೆ ಎಂದರೆ ಸರಿಯಲ್ಲ. ತಕರಾರಿನ ಬರೆದಿರುವ ಸಂಗತಿಗಳು ನನಗೆ ತಿಳಿದಿರುತ್ತದೆ. ನಮ್ಮ ಆ ಸ್ತಿಯನ್ನು ನನ್ನ ತಂದೆ ಬೇರೊಬ್ಬರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಖರೀದಿಸಿದ ಆಸ್ತಿಯ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರದಲ್ಲಿ ಅಡಿಗಳಲ್ಲಿ ವಿಸ್ತೀರ್ಣ ನಮೂದಿಸಿದ್ದಾರೆಯೇ ಎಂದರೆ ಸಾಕ್ಷಿಯು ಅಂಕಣದಲ್ಲಿ ವಿಸ್ತೀರ್ಣವನ್ನು ನಮೂದಿಸಿರುತ್ತಾರೆಂದು ನುಡಿಯುತ್ತಾರೆ.

3. ರೆವಿನ್ಯೂ ಇಲಾಖೆಯಲ್ಲಿ ಅಂಕಣವನ್ನು ನಿರ್ದಿಷ್ಟವಾಗಿ ಅಡಿ ಲೆಕ್ಕದಲ್ಲಿ ತಿಳಿಸಿರುವುದಿಲ್ಲ. ಕೆಲವು ಕಡೆ 7 ಅಡಿ ಹಾಗೂ 9 ಅಡಿ ತಿಳಿಸಿರುತ್ತಾರೆ. ಅಂಕಣಗಳನ್ನು ಅಡಿಗಳಲ್ಲಿ ಹೇಳಿರುವ ದಾಖಲೆಗಳನ್ನು ನಾನು ನೋಡಿರುತ್ತೆನೆ. ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ಸಮಸ್ಯೆ ಇರುವುದಿಲ್ಲ. ರೆವಿನ್ಯೂ ಇಲಾಖೆಯವರು ಅಂಕಣ ಹಾಗೂ ಅಡಿಗಳನ್ನು ನಿಗಧಿ ಪಡಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ಒಂದು ಅಂಕಣಕ್ಕೆ 7 ಅಥವಾ 9 ಎಂದು ನಾನು ಯಾವುದೇ

ಆಧಾರವಿಲ್ಲದೇ ಊಹಿಸಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಎರಡು ಮನೆಗಳ ಪೈಕಿ ಯಾವ ಮನೆ 1 ಅಂಕಣಕ್ಕೆ 7 ಅಡಿ ಹಾಗೂ 1 ಅಂಕಣಕ್ಕೆ 9 ಅಡಿ ಎಂದು ಹೇಳಲು ನನಗೆ ಗೊತ್ತಾಗುತ್ತಿಲ್ಲ. ಹಾಗಾಗಿ ವಾದಿಗಳು ಬಿಟ್ಟುರುವ 3 ಅಡಿ ಜಾಗ ನಮಗೆ ಸೇರಿದ್ದು ಎಂದು ಬಾವಿಸಿರುತ್ತೇನೆ ಎಂದರೆ ಸರಿ. ಬಿಟ್ಟಿರುವ 3 ಅಡಿ ಜಾಗದ ಪೂರ್ವ ದಿಕ್ಕಿಗೆ ವಾದಿಗೆ ಸಂಬಂದಿಸಿದ ಬಾಗಿಲು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ಯಾಸೇಜ್ ನಮಗೆ ಸೇರಿದ್ದು ಎಂದು ನುಡಿಯುತ್ತಾರೆ.

3. ವಾದಿಯ ತಂದೆ ಮನೆ ಕಟ್ಟಿದ ನಂತರ ನನ್ನ ತಂದೆ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮನೆ ಕಟ್ಟುವ ಕಾಲಕ್ಕೆ ದಕ್ಷಿಣ ದಿಕ್ಕಿಗೆ ಯಾವುದೇ ಜಾಗವನ್ನು ಬಿಟ್ಟುರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜಾಗವನ್ನು ಬಿಟ್ಟೇ ಕಟ್ಟಿರುತ್ತೇವೆಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ವಾದಿಯ ತಂದೆ ಅನ್ಯೋನ್ಯವಾಗಿದ್ದರು ಎಂದರೆ ಸರಿ. ನನ್ನ ತಂದೆ ಮನೆ ಕಟ್ಟುವ ಕಾಲಕ್ಕೆ ದಕ್ಷಿಣ ದಿಕ್ಕಿಗೆ ಸಜ್ಜೆಯನ್ನು ವಾದಿಯ ಜಾಗದಲ್ಲಿ ಹಾಕಿದ್ದಾಗ ಅವರಿಬ್ಬರು ಅನ್ಯೋನ್ಯವಾಗಿದ್ದರಿಂದ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆ ಖರೀದಿ ಮಾಡಿದ ಸ್ವಳದ ವಿಸ್ತೀರ್ಣ ಪೂರ್ವ ಪಶ್ಚಿಮ 120 ಅಡಿ ಉತ್ತರ ದಕ್ಷಿಣ 59+3 ಆಗಿರುತ್ತದೆ. ಸದರಿ ವಿಸ್ತೀರ್ಣವನ್ನು ನಮ್ಮ ಊಹೆ ಮೇಲೆ ಇಸ್ವತ್ತು ಹಾಗೂ ಪ್ರತಿವಾದಿ ಪತ್ರದಲ್ಲಿ ನಮೂದಿಸಿರುತ್ತೇವೆ. ಇಸ್ವತ್ತಿನ ಪ್ರಕಾರ ನಾನು ವಿಸ್ತೀರ್ಣವನ್ನು ತಿಳಿಸುತ್ತಿದ್ದೇನೆ. ನನ್ನ ತಂದೆ ಖರೀದಿ ಮಾಡಿದ ಸ್ವಳದ ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ 120 ಅಂಕಣ ಇರುತ್ತದೆ. ಇಸ್ವತ್ತನ್ನು ನನ್ನ ಹೇಳಿಕೆಯ ಪ್ರಕಾರ ಗ್ರಾಮ ಪಂಚಾಯಿತಿಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರ್ವೆ ಮಾಡಿ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.